**ಸಾಕ್ಷಿಯನ್ನು ದಿಃ 16.07.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಎರಡು ಕೇಸ್ ಶೀಟನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 23 ಎಂದು, ಅಸ್ಮೆಂಟ್ ಪ್ರೋಫಾರ್ಮ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 24 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 3 ನೇ ಎದುರುದಾರರ ಪರ ವಕೀಲರಿಂದ**

ನಾರಾಯಣ ಹೃದಾಲಯ ಆಸ್ಪತ್ರೆಯಲ್ಲಿ ಎಂ.ಎಲ್.ಸಿ. ಆಗಿರುವುದಿಲ್ಲ. ಕೇಸ್ ಶೀಟ್ ನಲ್ಲಿ Skid and fall ಎಂದು ನಮೂದಾಗಿದ್ದು ಯಾವ ವಾಹನದಿಂದ ಬಿದ್ದಿರುತ್ತಾರೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ಸದರಿ ಮಾಹಿತಿಯನ್ನು ಕೇಸ್ ಶೀಟ್ ನ 7 ನೇ ಪುಟದಲ್ಲಿ ಗಾಯಾಳು ನೀಡಿರುತ್ತಾರೆ ಎಂದು ನಮೂದಾಗಿದೆ ಎಂದರೆ ಸರಿ. 2020 ನೇ ಇಸವಿಯಲ್ಲಿ ಸ್ಕ್ರೂ ತೆಗೆದಿರುತ್ತೇವೆ ಎಂದರೆ ಸರಿ. ದಿಃ 24.12.2020 ರಂದು ಬಿಡುಗಡೆಯಾಗಿರುತ್ತಾರೆ. ಪ್ರಮಾಣ ಪತ್ರದಲ್ಲಿ 26.12.2020 ಎಂದು ತಪ್ಪಾಗಿ ನಮೂದಾಗಿರುತ್ತದೆ. ನಮ್ಮ ಆಸ್ಪತ್ರೆಯಲ್ಲಿ ಹೊರರೋಗಿ ದಾಖಲೆಗಳನ್ನು ಇಟ್ಟುಕೊಳ್ಳುವ ಪದ್ಧತಿ ಇದೆ. ಸದರಿ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ 7-8 ಬಾರಿ ಮುಂದುವರೆದ ಚಿಕಿತ್ಸೆಗೆ ಬಂದಿರುತ್ತಾರೆ ದಿನಾಂಕ ನೆನಪಿಲ್ಲ. ದಿಃ 02.07.2024 ರಂದು ಗಾಯಾಳುವನ್ನು ನೋಡಿರುತ್ತೇನೆ ಎಂದು ಹೇಳಿದ್ದು ಸದರಿ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಮುಂದುವರೆದು ಗಾಯಾಳುವಿನ ಬಳಿ ಇದೆ ಎಂದು ಉತ್ತರಿಸಿರುತ್ತಾರೆ. ದಿಃ 02.07.2024 ರಂದು ಪರೀಕ್ಷೆ ಮಾಡಿದ ಆಧಾರದ

ಮೇಲೆ ಈ ದಿನದ ಪ್ರಮಾಣ ಪತ್ರ ತಯಾರಿಸಿರುತ್ತೇನೆ ಎಂದರೆ ಸರಿ. ದಿನಕ್ಕೆ 10 ರಿಂದ 15 ಜನರನ್ನು ಹೊರರೋಗಿ ಆಧಾರದ ಮೇಲೆ ಚಿಕಿತ್ಸೆ ನೀಡಿರುತ್ತೇನೆ. ಕ್ಲಿನಿಕಲ್ ಫೈಡಿಂಗ್ಸ್ ಮಾಡಿರುವ ದಾಖಲೆ ಹಾಜರು ಪಡಿಸದೇ ಇರುವ ಕಾರಣ ಪ್ರಮಾಣ ಪತ್ರದಲ್ಲಿರುವ ವಿಷಯಗಳಿಗೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ದಿಃ 02.07.2024 ರ ಮುಂಚಿನ ದಾಖಲೆಗಳಲ್ಲಿ ಗಾಯಾಳು ನೋವು ಇದೆ ಎಂದು ಹೇಳಿರುವ ಬಗ್ಗೆ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಹೊರರೋಗಿ ದಾಖಲೆ ಇದೆ ಅವಶ್ಯಕತೆ ಇದ್ದರೆ ಹಾಜರು ಪಡಿಸುತ್ತೇನೆ ಎಂದು ಉತ್ತರಿಸಿರುತ್ತಾರೆ. ಎಷ್ಟು ತೂಕದ ಭಾರ ಎಷ್ಟು ಎತ್ತರಕ್ಕೆ  ಎತ್ತಲು ಆಗುವುದಿಲ್ಲ ಎಂದು ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಗಾಯಾಳು ಬಲಗೈ ಉಪಯೋಗಿಸುತ್ತಾರೆ ಎಂದರೆ ಸರಿ.

ಸ್ಟಿಫನೆಸ್ ಆಫ್ ಜಾಯಂಟ್ ಎಂದು ಹೇಳಿದ್ದು ಯಾವ ಜಾಯಂಟ್ ನಲ್ಲಿ ಸ್ಟಿಫನೆಸ್ ಇದೆ ಎಂದು ನಿಖರವಾಗಿ ಹೇಳಿರುವುದಿಲ್ಲ ಎಂದರೆ ಸರಿ. 2018ರ ಮಾರ್ಗ ಸೂಚಿಯನ್ನು ಅನುಸರಿಸಿ ನ್ಯೂನತೆಯನ್ನು ಪರಿಗಣಿಸಿರುತ್ತೇನೆ. ಗೈಡ್ ಲೈನ್ ನ ಅಪೆಂಡಿಕ್ಸ್ 3 ರಲ್ಲಿ ಭುಜಕ್ಕೆ ಸಂಬಂಧಪಟ್ಟಂತೆ ಹೇಳಿರುತ್ತಾರೆ ಎಂದರೆ ಸರಿ. ಅಪೆಂಡಿಕ್ಸ್ 3 ರಂತೆ Flexion ಗೆ ನಾರ್ಮಲ್ ರೇಂಜ್ 0 -180 ನೀಡಬೇಕಾಗಿದ್ದು ನಾನು 0-220 ಹೇಳಿರುತ್ತೇನೆ ಎಂದರೆ ಸಾಕ್ಷಿಯು aduction, abduction ಸೇರಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. Extension  ಗೆ 0-50 ನಾರ್ಮಲ್ ರೇಂಜ್ ಇದ್ದು ನಾನು 0-180 ಹಾಕಿರುತ್ತೇನೆ ಎಂದರೆ ಮೀಡಿಯಲ್ ರೋಟೇಶನ್, ಲ್ಯಾಟರಲ್ ರೋಟೇಶನ್ ಸೇರಿಸಿರುತ್ತೇನೆ ಎಂದು ಉತ್ತಸಿರುತ್ತಾರೆ. ರೋಟೇಶನ್ ಎಕ್ಸರ್ಟನಲ್ ಗೆ 0-90 ನಾರ್ಮಲ್ ರೇಂಜ್ ಇದ್ದು ನಾನು 0-180 ಕಾಣಿಸಿರುತ್ತೇನೆ ಎಂದರೆ ಅದು ತಪ್ಪಾಗಿರಬಹುದು ಎಂದು ಉತ್ತರಿಸಿರುತ್ತಾರೆ. ಗೈಡ್ ಲೈನ್ ಪ್ರಕಾರ ನಷ್ಟ ಸಿಗುವುದಿಲ್ಲ ಎಂದರೆ ಸರಿ. ಹ್ಯೂಮರಸ್ ಫ್ರಾಕ್ಚರ್ ಆಗಿರುವ ಕಾರಣ ಭುಜದ ಜಾಯಂಟ್ ಗೆ ತೊಂದರೆ ಆಗುವುದಿಲ್ಲ ಎಂದರೆ ಸರಿ. ಹ್ಯೂಮರಸ್ ಫ್ರಾಕ್ಚರ್ ಗೆ ನೀಡುವ ಔಷಧಿ ಭುಜದ ಮಜಲ್‌ಸ್ಟೆಂತ್ ಗೂ ಕೆಲಸ ಮಾಡುತ್ತದೆ ಎಂದರೆ ಸರಿ. ಹಾಗಾಗಿ

ಒಂದು ಗ್ರೇಡ್ ನಷ್ಟು ಕೊರತೆ ಇದೆ ಎಂದು ಹೇಳಿದ್ದು ಅಷ್ಟು ಪ್ರಮಾಣದಲ್ಲಿ ಕೊರತೆ ಬರುವುದಿಲ್ಲ ಎಂದರೆ ಸರಿಯಲ್ಲ. 2018 ರ ಗೈಡ್ ಲೈನ್ ಪ್ರಕಾರ ನಾನು ಹಾಕಿರುವ ಲೆಕ್ಕಾಚಾರ ಸರಿಯಾಗಿಲ್ಲ ಎಂದರೆ ಸರಿಯಲ್ಲ. ಎಕ್ಸಟ್ರಾ ಪಾಯಂಟ್ ಗೆ 3% ನ್ಯೂನತೆಯನ್ನು ಯಾವುದೇ ಆಧಾರ ಇಲ್ಲದೇ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಉತ್ತ್ವಕ್ಷೆಣೆಯಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.